**ಸಾಕ್ಷಿಯನ್ನು ದಿಃ *11/02/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

***ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರು ಇರುವುದಿಲ್ಲ ಎಂದು ಹೇಳಿರುತ್ತಾರೆ.***

***ಪಾಟೀ ಸವಾಲು : ಶ್ರೀ ಎಸ್‌ಟಿಪಿ ವಕೀಲರಿಂದ ಪ್ರತಿವಾದಿಯರ ಪರವಾಗಿ.***

ನಾನು ಹುಬ್ಬಳ್ಳಿಯ ಭವಾನಿನಗರದಲ್ಲಿ ವಾಸವಿದ್ದೇನೆ. ದಾವಾ ಜಮೀನು ಧಾರವಾಡ ಮಾರಡಗಿ ಗ್ರಾಮದ ಹದ್ದಿಯಲ್ಲಿ ಬರುತ್ತದೆ. ನಮ್ಮ ಮನೆಗೆ ಮತ್ತು ಜಮೀನಿಗೆ ಅಂದಾಜು 10 ಕಿ.ಮಿ. ದೂರವಾಗುತ್ತದೆ. ಸದರಿ ಅಂತರ 20 ಕಿ.ಮಿ. ಇದ್ದು 10 ಕಿ.ಮಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಾರಡಗಿ ಗ್ರಾಮದಲ್ಲಿ ಇನ್ನೊಂದು ಎರಡು ಎಕರೆ ಜಮೀನು ಇರುತ್ತದೆ, ಅದರ ಸರ್ವೇ ನಂಬರ 339 ಇರುತ್ತದೆ. ಸದರಿ ಜಮೀನಿನ ದಾಖಲಾತಿ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ಹುಬ್ಬಳ್ಳಿ ಸರಹದ್ದಿಯಲ್ಲಿ ನಮಗೆ ಸಂಬಂಧಿತ ಯಾವುದೇ ಶೇತ್ಕಿ ಜಮೀನು ಇರುವುದಿಲ್ಲ. ನಾನು ಶೇತ್ಕಿ ಮಾಡುತ್ತೇನೆ ಎಂದು ತೋರಿಸಲು ದಾಖಲೆಗಳು ಇವೆ, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ದಾಖಲೆ ಎಂದರೆ ರೈತರ ಹೆಸರಿನಲ್ಲಿ ಮಂಜೂರಾತಿ ಮಾಡಿರುವ ಗ್ರೀನ್ ಕಾರ್ಡ. ನಾನು ಬಡ್ಡಿ ಸಾಲದ ಲೇವಾದೇವಿ ವ್ಯಾಪಾರ ಮಾಡುತ್ತಿದ್ದರು ಸಹ ಶೇತ್ಕಿ ಮಾಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾದಾಸ್ತಿಯನ್ನು ಖರೀದಿಗೆ ಕೊಡುತ್ತಾರೆ ಎಂದು ನೇಮಣ್ಣ ಮುಗದ ಮತ್ತು ಶೀವು ಬಿಲಾರ ಇವರು ಹೇಳಿರುತ್ತಾರೆ. ಈ ರೀತಿ ಅವರು ನನಗೆ 2019 ನೇ ಇಸ್ವಿಯಲ್ಲಿ ಹೇಳಿರುತ್ತಾರೆ, ಆದರೆ ತಿಂಗಳು ನೆನಪಿಲ್ಲ. ಅಂದಾಜು ನವೆಂಬರ ಅಥವಾ ಡಿಸೆಂಬರನಲ್ಲಿ ಇರಬಹುದು. ಈ ರೀತಿ ಅವರು ಹೇಳಿದಾಗ ನಾನು ಶಿವಳ್ಳಿ ಗ್ರಾಮದಲ್ಲಿದ್ದೆ. ಈ ರೀತಿ ಮಾಹಿತಿಯ ನಂತರ ಆಸ್ತಿಯ ಉತಾರವನ್ನು ತೆಗೆಸಿ ನೋಡಿರುತ್ತೇನೆ. ಸದರಿ ಉತಾರದ ಪ್ರಕಾರ ದಾವಾದಾಸ್ತಿ 6-7 ಜನರ ಮಾಲೀಕತ್ವಕ್ಕೆ ಸಂಬಂಧಿಸಿದ್ದು ಇರುತ್ತದೆ ಎಂದು ಗೊತ್ತಾಯಿತು. ಈ ರೀತಿ ಎಲ್ಲ ಮಾಲೀಕರ ನಡುವೆ ವಾಟ್ನಿಯಾದ ಕುರಿತು ನಾನು ಮಾಹಿತಿ ತೆಗೆದಿರುತ್ತೇನೆ. ಪ್ರತಿವಾದಿ ನಂ.1 ಮತ್ತು 2 ತಾಯಿ ಮಗನಿದ್ದು, ಅವರಿಬ್ಬರಿಗೂ ಸೇರಿ 1 ಎಕರೆ 17 ಗುಂಟೆ ಜಮೀನು ಮತ್ತು ಇನ್ನೊಂದು 1 ಎಕರೆ 26 ಗುಂಟೆ ಜಮೀನು ಅವರ ಪಾಲಿಗೆ ಬಂದಿರುತ್ತವೆ. ಈ ರೀತಿ ಪ್ರತ್ಯೇಕ ಹಿಸ್ಸೆಗಳು ಎಂದರೆ 1 ಎಕರೆ 26 ಗುಂಟೆ ಮತ್ತು 1 ಎಕರೆ 17 ಗುಂಟೆ ಬಂದಿರುವ

ಕುರಿತು ಪಹಣಿ ಪತ್ರಿಕೆಯಲ್ಲಿ ದಾಖಲು ಆಗಿರಲಿಲ್ಲ, ಒಟ್ಟಿಗೆ ಇದ್ದವು. ಈ ರೀತಿ ಸಾಮೂಹಿಕವಾಗಿ ಉಲ್ಲೇಖವಿರುವ ಮಾಲೀಕರ ಸಮ್ಮತಿಯನ್ನು ಕರಾರಿನ ಕಾಲಕ್ಕೆ ಪಡೆದುಕೊಂಡಿಲ್ಲ.

ನಾನು ದಾವಾದಾಸ್ತಿ ಮಾರಾಟ ಮಾಡಿರುವ ಕುರಿತು ಮಾಲೀಕರಾದ ನೀಲವ್ವ ಮತ್ತು ನಾಗಪ್ಪ ಇವರನ್ನು ಶಿವಳ್ಳಿ ಗ್ರಾಮದಲ್ಲಿ ಭೇಟಿಯಾಗಿರುತ್ತೇನೆ. ಆಗ ನನಗೆ ಮಾರಾಟದ ಕುರಿತು ಹೇಳಿರುವ ಮೇಲೆ ವ್ಯಕ್ತಿಗಳು ಸಹ ಹಾಜರು ಇದ್ದರು. ಸದರಿಯವರಿಗೆ ನಾವು ಮಾರಾಟದ ಕುರಿತು ಮಾತುಕತೆ ಮಾಡಲು ಭೇಟಿಯಾದೆವು. ನಾವುಗಳನ್ನು ಹೊರತುಪಡಿಸಿ ಊರಿನ 8-10 ಜನರು ಸಹ ಪ್ರಸ್ತುತವಿದ್ದರು. ಸದರಿಯವರು ಶಿವಳ್ಳಿ ಗ್ರಾಮದವರು ಇದ್ದು, ಅವರ ಹೆಸರು ಮತ್ತು ವಿವರಗಳು ನನಗೆ ಗೊತ್ತಿಲ್ಲ. ಸದರಿ ಮಾತುಕತೆ 2019 ನೇ ಡಿಸೆಂಬರ ತಿಂಗಳಲ್ಲಿ ಆಗಿರುತ್ತದೆ, ಆದರೆ ದಿನಾಂಕ ನನಗೆ ನೆನಪಿಲ್ಲ. ಆಗ ಸಂಜೆಯಾಗಿದ್ದು, ಆದರೆ ಖಚಿತವಾಗಿ ಸಮಯ ಹೇಳಲು ಬರುವುದಿಲ್ಲ.

ಈ ರೀತಿ ಮೂರು ಎಕರೆ ಮೂರು ಗುಂಟೆ ಕುರಿತು ಮಾತನಾಡಿದ್ದೇವೆ. ಒಂದ ಎಕರೆಗೆ ಎಷ್ಟು ಪ್ರತಿಫಲ ಮಾತನಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಒಟ್ಟು ಎಂಟು ಲಕ್ಷ ಚಿಲ್ಲರೆ ಮಾತನಾಡಿದ್ದೇವೆ ಎಂದು ಉತ್ತರಿಸುತ್ತಾರೆ. ಈ ರೀತಿ ಒಂದು ಎಕರೆಗೆ ನಿಖರವಾಗಿ ಎಷ್ಟು ಬೆಲೆ ಎಂದು ಹೇಳಲು ಬರುತ್ತದೆಯೊ ಎಂಬ ಪ್ರಶ್ನೆಗೆ ಸಾಕ್ಷಿದಾರರು ಈಗ ನನಗೆ ನೆನಪು ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮಾತುಕತೆ ದಿನದಂದು ನಾವು ಯಾವುದೇ ರೀತಿ ಮುಂಗಡ ಹಣ ನೀಡಲಿಲ್ಲ. ಸದರಿ ಮಾತುಕತೆಯನ್ನು ನಾವು ಬಾಂಡ ರೂಪದಲ್ಲಿ ಕರಾರು ಮಾಡಿಕೊಂಡಿರುತ್ತೇವೆ. ಸದರಿ ದಾಖಲೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ, ಅದು ನನ್ನ ಬಳಿ ಇರುತ್ತದೆ, ಮುಂದಿನ ಮುದ್ದತ್ತಿಗೆ ಹಾಜರುಪಡಿಸುತ್ತೇನೆ. ಸದರಿ ಕರಾರಿನಲ್ಲಿ ಏನೂ ಬರೆದಿದೆ ಎಂದು ಸದ್ಯಕ್ಕೆ ನೆನಪಿಲ್ಲ, ದಾಖಲೆ ನೋಡಬೇಕಾಗುತ್ತದೆ ಎಂದು ಹೇಳುತ್ತಾರೆ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.